ಬೇಳಿಗಯವರೇ, ಆ ಒಂದು ಸಾರಿಗೆ ಸಂಸ್ಥೆ ದಿವಾಳಿ ಆಗಬೇಕೆಂದು ಹೇಳಿದ್ದವು. ಈಗಾಗಲೇ ತಮ್ಮನ್ನು...

ಉಪಾಧ್ಯಕ್ಷರು : ಕುಡಿಯುವ ನೀರಿನ ಬಗ್ಗೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ ಅಲ್ಲಿಯ ಜನ ಅನುಭವಿಸುತ್ತಿರುವಂಥ ಪರಿಸ್ಥಿತಿ ಇದು. ಸುಮಾರು 25 ಸಾವಿರಕ್ಕೂ ಮೇಲ್ಪಟ್ಟು ತೆಂಗಿನ ಗಿಡಗಳು ಕರಿಯಳದಿಂದಾಗಿ ನಾಶವಾಗುತ್ತಿವೆ. ಇದರ ಬಗ್ಗೆ ತೋಟಗಾರಿಕೆ ಇಲಾಖೆಯವರಿಗೆ ಔಷಧಿಯನ್ನು ಕೊಡುವುದಕ್ಕೆ ಆಗಿಲ್ಲ. ಈ ಪರಿಸ್ಥಿತಿ ನಿರ್ಮಾಣವಾಗಿದೆ. ಒಂದು ಕಡೆ ನಾವು ಇಲ್ಲಿ ಬಂದು ಕುಳಿತಿದಿದ್ದೇವೆ. ಜನ ಹೇಳುತ್ತಾರೆ-'ವಾಟಾಳ್ ನಾಗರಾಜ್ ರವರೇ ನೀವು ಅಲ್ಲಿ ಹೋಗಿ ಮಾತನಾಡುತ್ತೀರಿ. ತಾಲ್ಲೂಕಿನ ಪರಿಸ್ಥಿತಿ ಏನಾಗಿದೆ ಎಂದು ಸುಮಾರು 130 ಹಳ್ಳಿಗಳಿಗೆ ಕನಿಷ್ಟ...

ಉಪಾಧ್ಯಕ್ಷರು : ಜನರಲ್ ಡಿಸ್‌ಕಶನ್ ಬೇಡ. ಕುಡಿಯುವ ನೀರಿನ ಬಗ್ಗೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇದು ಸರಿಯಲ್ಲ. ನಾನು ಧರಣಿ ಕುಳಿತುಕೊಳ್ಳುತ್ತೇನೆ. ನನಗೆ ಬಹಳ ನೋವಾಗಿದೆ.

ಒಬ್ಬರು ಮಾನ್ಯ ಸದಸ್ಯರು : ತೆಂಗಿನ ಗಿಡಕ್ಕೆ ಕರಿಯಳು ರೋಗ ಉಂಟಾಗಿತಕ್ಕಂಥಾದ್ದು ತುಮಕೂರು ಜಿಲ್ಲೆಗೆ, ಕಡೂರು ತಾಲ್ಲೂಕು-ಚಿಕ್ಕಮಗಳೂರು ಜಿಲ್ಲೆಗೆ. ಈಗ ಕಾಪಿಲೆಯನ್ನು ವಾಸ ಮಾಡತಕ್ಕಂಥ ಪರಿಸ್ಥಿತಿ ಇದೆ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಅಧ್ಯಕ್ಷ ಪೀಠದ ಮುಂಭಾಗದ ಜಾಗದಲ್ಲಿ ಧರಣಿ ಕುಳಿತುಕೊಂಡರು)

(ಗೊಂದಲ)

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅತ್ಯಂತ ಪ್ರಮುಖವಾದ ವಿಷಯವನ್ನು ಅವರ ತಾಲ್ಲೂಕಿಗೆ ಸೀಮಿತವಾಗಿ ಪ್ರಸ್ತಾಪ ಮಾಡಿದ್ದರೂ ಸಹ ಸಮಯದ ಅಭಾವದಿಂದ ಅನೇಕ ವಿಷಯಗಳನ್ನು ನಮಗೆ ಚರ್ಚೆ ಮಾಡುವುದಕ್ಕೆ ಆಗಲಲ್ಲಿ. ಇದು ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಗಮನಕ್ಕೂ ಬಂದಿದೆ. ಇಡೀ ಸದನ ಎಲ್ಲ ಶಾಸಕರುಗಳಿಗೂ ಗೊತ್ತಿದೆ. ಹದಿನೈದು-ಇಪ್ಪತ್ತು ವರ್ಷಗಳ ನಂತರ ಮೊದಲಬಾರಿಗೆ ಕರ್ನಾಟಕ ರಾಜ್ಯದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ನೀರಾವರಿ ಪ್ರದೇಶಗಳನ್ನು ಬಿಟ್ಟು ಬೇರೆ ಎಲ್ಲಕಡೆ ಕೆರೆಕಟ್ಟೆಗಳು ಸಂಪೂರ್ಣವಾಗಿ ಬತ್ತಿಹೋಗಿವೆ. ಕೆರೆಕಟ್ಟೆಗಳಲ್ಲಿ ನೀರು ಇಲ್ಲದ ಪರಿಣಾಮವಾಗಿ ಬೋರ್ ವೆಲ್‌ಗಳಲ್ಲಿ ಏನು ನೀರು ಸಿಗುತ್ತಿತ್ತು, ಅದರ ಮಟ್ಟ ಕೆಳಗೆ ಹೋಗುತ್ತ ಹೋಗುತ್ತ ಇವತ್ತು ನೀರು ಬಾರದೇ ಇರುವ ದಾರುಣ ಪರಿಸ್ಥಿತಿಯನ್ನು ನಾವು